## 2

# ಉತ್ತೇಜನದ ಮೂಲ

# (1:1-4ಎ)

ಇಬ್ರಿಯ ಪತ್ರಿಕೆಯು "ಉತ್ತೇಜನದ ಪುಸ್ತಕವೆಂದು" ಪರಿಚಯಿಸಿದ್ದೇನೆ. ಪುಸ್ತಕದ ಆಡಿಯಲ್ಲಿಯೇ ನಮ್ಮ ಉತ್ತೇಜನದ ಮೂಲವನ್ನು ಪರಿಚಯಿಸಲಾಗಿದೆ: ಆತನು ಯೇಸು ಕ್ರಿಸ್ತನೇ ವಚನ 1ರಿಂದ 4ರವರೆಗೆ ವಾಕ್ಯದ ಪ್ರಮುಖ ಅಂಶವಾಗಿದೆ. ಯೇಸು ಕ್ರಿಸ್ತನೇ ಉತ್ತೇಜನದ ಮೂಲವಾಗಿದ್ದು, ಆತನಿಂದ ಇನ್ನೂ ಅನೇಕ ವಿಧವಾದ ಆಶೀರ್ವಾದಗಳು ದೊರೆಯುತ್ತವೆ.

### ಆತನ ಪುತ್ರತ್ವ (1:1, 2ಎ)

"ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ *ಮಗನ* ಮುಖಾಂತರ ಮಾತಾಡಿದ್ದಾನೆ" (ವಚನಗಳು 1:2ಎ; ಒತ್ತಿ ಹೇಳಿದ್ದು ನನ್ನದು). (ಅರಸನಾದ) ಯೇಸುವಿನ ಮಹತ್ವವನ್ನು ವರ್ಣಿಸಿ, ಆತನಿಗೆ ಸಮಾನರು ಯಾರು ಇಲ್ಲ ಎಂದು ಇಬ್ರಿಯ ಪುಸ್ತಕದ ಆರಂಭದಲ್ಲಿ ಗಮನಿಸುತ್ತೇವೆ. ಯೇಸುವಿನ ಪುತ್ರತ್ವವನ್ನು ಒತ್ತಿ ಹೇಳಲಾಗಿದೆ. 2:9ರವರೆಗೆ ಆ ಮಗನ ನಿರ್ಧಿಷ್ಟವಾದ ಹೆಸರನ್ನು ದಾಖಲಿಸಿರುವದಿಲ್ಲ. ಈ ವ್ಯಾಖ್ಯಾನದಲ್ಲೂ "ಮಗನು" ಎಂದು ತಿಳಿಸಲಾಗಿದೆ. ಅವನು ಅರ್ಹನು - ಯೋಗ್ಯನು ಆದ ದೇವರ ಮಗನಾಗಿರುವನು.

### ಆತನ ಪ್ರಾಮುಖ್ಯತೆ (1:2ಬಿ, 3)

ವಚನ 2ರ ಹಾಗೂ 3ರ ಉಳಿದ ಭಾಗದಲ್ಲಿ ಮಗನ ಕುರಿತ ಏಳು ವೈಶಿಷ್ಟಗಳನ್ನು ತಿಳಿಸಲಾಗಿದೆ - ಅವುಗಳಲ್ಲಿ ಯೇಸುವಿನ ಮಹತ್ವವನ್ನು ತೋರಲಾಗಿದೆ.

*ಬಾಧ್ಯನು:* "ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು" (ವಚನ 2ಸಿ). ಯೇಸು ದೇವರ ಮಗನಾಗಿರುವದರಿಂದ, ಆತನು ಎಲ್ಲಕ್ಕೂ ಬಾದ್ಯಸ್ಥನು ಹಕ್ಕುಳ್ಳವನೂ ಆಗಿರುವನು.

*ಸೃಷ್ಟಿಕರ್ತನು:* "ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು" (ವಚನ 2ಸಿ). "ಜಗತ್ತು" ಅಂದರೆ "ಯುಗದ ಸಕಲ ಸಮಯ" ಎಂಬ ಅರ್ಥವಾಗಿದೆ. ಯೇಸು ದೇವರ ಮಗನಾಗಿರುವದರಿಂದ, ಸಕಲವನ್ನು ಉಂಟುಮಾಡುವ ದೇವ ಶಕ್ತಿಯನ್ನು ಹೊಂದಿರುವನು (ಯೋಹಾನ 1:3; ಕೊಲೊಸ್ಸೆ 1:16).

*ದೇವ ಪ್ರಭಾವದ ಬಿಂಬ:* "ಈತನು ದೇವರ ಪ್ರಭಾವದ ಪ್ರಕಾಶ" (1:3ಎ). ಹಳೆ ಒಡಂಬಡಿಕೆಯಲ್ಲಿ, "ದೇವರ ಪ್ರಭಾವವು ಗುಡಾರವನ್ನು ತುಂಬಿಕೊಂಡಿತ್ತು" (ವಿಮೋಚನಕಾಂಡ 40:34-38), ಆ ಪ್ರಭಾವವು ದೇವರ ಮಹಿಮೆಯಾಗಿತ್ತು. ಹೊಸ ಒಡಂಬಡಿಕೆಯಲ್ಲಿ "ಯೇಸು ದೇವರ ಬಿಂಬವಾಗಿದ್ದಾನೆ" ಸೂರ್ಯನ ಕಿರಣಗಳನ್ನು ಸೂರ್ಯನಿಂದ ಪ್ರತ್ಯೇಕಿಸಲು ಅಸಾಧ್ಯವಾಗಿರುವಂತೆ, ಯೇಸುವನ್ನು ತಂದೆಯಿಂದ ಬೇರ್ಪಡಿಸಲಾಗದು.

*ದೇವರ ಪ್ರತಿರೂಪ:* "ಆತನ ತತ್ವದ ಮೂರ್ತಿ" (ವಚನ 3ಬಿ). "ಸ್ವಭಾವ" ಅಂದರೆ ಆತನು ದೇವರೇ ಎಂಬ ಅರ್ಥವಾಗಿದೆ. "ಆತನು ದೇವರ ಸ್ವಭಾವದ ಪ್ರತಿರೂಪವೇ" ಎಂಬ

ಅರ್ಥ. "ಯೇಸು ದೇವರ ವಾಕ್ಯವನ್ನು ಮಾತ್ರ ನೀಡಲು ಲೋಕಕ್ಕೆ ಬಾರದೆ, ದೇವ ಸ್ವಭಾವವನ್ನೇ ಪ್ರಕಟಿಸಲು ಬಂದನು" (ಯೋಹಾನ 14:9). ಇಲ್ಲಿ ನೋಡಲಿರುವ ಏಳು ವೈಶಿಷ್ಟತೆಗಳನ್ನು ಈತನಲ್ಲಿ ಮಾತ್ರ ನೋಡುತ್ತೇವೆ. ಯಾಕಂದರೆ ಆತನೇ ದೇವರಾಗಿದ್ದಾನೆ.

*ಸಮಸ್ತಕ್ಕೆ ಆಧಾರನು:* "ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿರುವನು" (ಇಬ್ರಿಯ 1:3ಸಿ). ಕೊಲೊಸ್ಸೆ 1:17ರಲ್ಲಿ "ಆತನು ಎಲ್ಲಕ್ಕೂ ಮೊದಲು ಇದ್ದವನು: ಆತನು ಸಮಸ್ತಕ್ಕೂ ಆಧಾರ ಭೂತನು" ಎಂದು ಪ್ರಕಟಿಸುತ್ತದೆ.

*ವಿಮೋಚಕನು:* "ಈತನು ಪಾಪಶುದ್ಧಿ ಮಾಡಿದನು" (ಇಬ್ರಿಯ 1:3ಡಿ). ಯೇಸುವಿನಿಂದ ದೊರಕುವ ಪಾಪಶುದ್ಧಿಯ ಸಂಗಡ, ಆತನ ಯಾಜಕ ಕಾರ್ಯವನ್ನು ವಿವರಿಸಲಾಗಿದೆ. ಸೃಷ್ಟಿಕರ್ತನ ಶಕ್ತಿಯನ್ನು ಹಾಗೂ ರಕ್ಷಕನಾದ ಯೇಸುವಿನ ಬಾಧೆಗಳು, ಈ ಎರಡರ ಸಂಬಂಧವನ್ನು ಅಸಮಂಜಸ ಎಂದಿರುವದಿಲ್ಲ.

*ಆಸನರೂಢ:* "ಈತನು ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು" (ವಚನ 3ಇ). ಯೇಸು ಏರಿಹೋಗಿ, ದೇವರ ಬಲಪಾರ್ಶ್ವದಲ್ಲಿ ಆಸೀನನಾದ ಚಿತ್ರಣವನ್ನು ಇಲ್ಲಿ ವಿವರಿಸಲಾಗಿದೆ. ಇದರಲ್ಲಿ ಆತನಿಗಿರುವ ಬಲ ಹಾಗೂ ಗೌರವವನ್ನು ನೋಡುತ್ತೇವೆ ನಮ್ಮ ಕರ್ತನಾದ ಯೇಸು ಮಹತ್ವವುಳ್ಳವನೇ!

## ಆತನ ಶ್ರೇಷ್ಟತ್ವ (1:4ಎ)

ಹಿಂದಿನ ವಚನದ ವಾಕ್ಯವನ್ನು ವಚನ 4ರಲ್ಲಿ ಅಂತ್ಯಗೊಳಿಸಲಾಗಿದೆ. "... ಈತನು ದೇವದೂತರಿಗಿಂತಲೂ ಉತ್ತಮನಾದವನು. ಆತನಿಗೆ ಅವರಿಗಿಂತಲೂ, ಉತ್ತಮವಾದ ಹೆಸರನ್ನು ನೀಡಲಾಗಿದೆ." ಮುಂದಿನ ಪಾಠದಲ್ಲಿ, ದೇವದೂತರಿಗಿಂತಲೂ ಶ್ರೇಷವಾದ ಯೇಸುವಿನ ಬಗ್ಗೆ ಚರ್ಚಿಸೋಣ, ಆದರೆ ಈ ಪಾಠದಲ್ಲಿ "ಉತ್ತಮ" ಎಂಬ ಪದವನ್ನು ನಾನು ಒತ್ತಿ ಹೇಳುತ್ತೇನೆ. "ಉತ್ತಮ" ಎಂಬ ಪದವು ಇಬ್ರಿಯ ಪತ್ರಿಕೆಯಲ್ಲಿ ಪ್ರಮುಖವಾದ ಪದವಾಗಿದೆ. ಇಬ್ರಿಯ 1:4ರಲ್ಲಿ, "ಯೇಸು" ದೇವದೂತರಿಗಿಂತಲೂ ಶ್ರೇಷ್ಟನೆಂದು ಹೇಳಲಾಗಿದೆ. ಮುಂದಿನ ವಾಕ್ಯಗಳಲ್ಲಿ ಕ್ರೈಸ್ತರು ಉತ್ತಮವಾದ ಒಡಂಬಡಿಕೆಯನ್ನು ಯಜ್ಞವನ್ನು ವಾಗ್ದಾನಗಳನ್ನು ಹಾಗೂ ಉತ್ತಮವಾದ ನಿರೀಕ್ಷೆ, ಮುಂತಾದವುಗಳನ್ನು ಹೊಂದಿರುವರು ಎಂದು ಹೇಳಲಾಗಿದೆ (1:4; 7:19, 22; 8:6; 9:23; 10:34; 11:16, 35, 40; 12:24). 1:4ರಲ್ಲಿ "ಉತ್ತಮ" ಎಂಬುದಕ್ಕಿಂತಲೂ NIV ಯು "ಶ್ರೇಷ್ಟ" ಎಂಬ ಪದ ಬರೆಯಲಾಗಿದೆ, ಆತನು ದೇವದೂತರಿಗಿಂತಲೂ ಶ್ರೇಷ್ಟನಾಗಿ, ಉತ್ತಮವಾದ ನಾಮವನ್ನು ಹೊಂದಿದ್ದನು.

ಯೇಸು ನಮಗೆ ಉತ್ತೇಜನದ ಮೂಲವಾಗಿದ್ದಾನೆ. ಆತನು ಪುತ್ರನ ಸ್ಥಾನವನ್ನು ಹೊಂದಿರುವದರಿಂದ ಸ್ವಭಾವ, ವೈಶಿಷ್ಟತೆಯನ್ನು ಹೊಂದಿರುವದರಿಂದ ಯೋಗ್ಯನಾಗಿದ್ದಾನೆ.

---

## ಬೋಧಕರಿಗಾಗಿ ಟಿಪ್ಪಣಿ

**ಯಜಮಾನ, ಸೃಷ್ಟಿಕರ್ತ, ಹಾಗೂ ರಕ್ಷಕ**

ಈ ಏಳು ಅಂಶಗಳನ್ನು ಗಮನಿಸಿದ ಬೋಧಕರಾಗಲೀ ಅಥವಾ ಪ್ರಸಂಗಿಗಳಾಗಲೀ. ಇದರಲ್ಲಿ ಯೇಸುವಿಗೂ ಮತ್ತು ಲೋಕಕ್ಕೂ ನಡುವೆ ಇರುವ *ಸಂಬಂಧವನ್ನು ಗಮನಿಸಬಹುದು.* (1) ಜಗತ್ತು, (2) ಲೋಕದಲ್ಲಿರುವ ಜನರು, ಅಥವಾ (3) ಲೋಕದಲ್ಲಿರುವ ಜನರು ದೇವರಿಗೆ ಸಂಬಂಧಿಸಿದವರು (ಕ್ರೈಸ್ತರು).

ಇದರ ಚರ್ಚೆಯನ್ನು ಮಾಡುವಾಗ, “ಅದು ಯಾವ ಜಗತ್ತು” ಎಂಬ ಪ್ರಶ್ನೆಯನ್ನು ಕೇಳಬಹುದು (1:2, ಅಥವಾ 3). ಕೆಲವು ಸಾರಿ ಈ ಪ್ರಶ್ನೆಗೆ ಅನೇಕ ಉತ್ತರಗಳಿರಬಹುದು. ಉದಾಹರಣೆ: “ಯಜಮಾನನು” ಮತ್ತು “ಸೃಷ್ಟಿ ಕರ್ತನೂ” ಆದ ಕ್ರಿಸ್ತನ ಕುರಿತ ವಿವರಣೆ ನೀಡಬೇಕಾಗಬಹುದು. (1) ರಲ್ಲಿ (2) ಮತ್ತು (3) ರನ್ನು ಸೇರಿಸಬಹುದು. ಮತ್ತೆ “ಲೋಕದ ರಕ್ಷಕನ ಕುರಿತು” ಸಕಲರಿಗೂ ಅಗತ್ಯವಿರುವ ರಕ್ಷಕನು ಯೇಸುವೇ ಆಗಿರುವನು. (2), ನಂಬಿಕೆ ಹಾಗೂ ವಿಧೇಯತೆಯಿಂದ ಆತನನ್ನು ಅಂಗೀಕರಿಸುವವರನ್ನು ಆತನು ರಕ್ಷಿಸುತ್ತಾನೆ (3).

- ಲೋಕದ ಯಜಮಾನ
- ಲೋಕದ ಸೃಷ್ಟಿಕರ್ತ ಲೋಕದ ಬೆಳಕು
- ಲೋಕವನ್ನು ಪ್ರಕಟಿಸಿದವನು
- ಲೋಕದ ರಕ್ಷಕ
- ಲೋಕಕ್ಕಾಗಿ ಭಿನ್ನಹ ಮಾಡುವವನು.[1]

**ಕ್ರಿಸ್ತನು:**

ತ್ರಯೋಕತ್ವದ, ಮತ್ತೊಂದು ಶಿರೋನಾಮೆಯನ್ನು ಯೆಹೂದ್ಯ ಹಿನ್ನೆಲೆಯಿಂದ ತಿಳಿಯುವುದಾದರೆ - ಅದು ಕ್ರಿಸ್ತನೇ, ಯುಗಗಳಿಂದಲೂ, ಈ ಮೆಸ್ಸೀಯನಿಗಾಗಿ ಅವರು ಕಾಯುತ್ತಿದ್ದರು. ಇದರ ಸ್ವಭಾವದ ಕುರಿತು ಈ ಕೆಳಗೆ ನೀಡಲಾಗಿದೆ:

- **C**reator (and Sustainer) ಸೃಷ್ಟಿ ಕರ್ತನು (ಕಾಪಾಡುವವನು)
- **H**eir of all things ಸಕಲಕ್ಕೂ ಬಾಧ್ಯಸ್ಥನು
- **R**adiation of God’s glory ದೇವರ ಪ್ರಭಾವ
- **I**mage of God ದೇವರ ತತ್ವಮೂರ್ತಿ
- **S**avior ರಕ್ಷಕನು
- **T**hrone-occupant ಸಿಂಹಾಸನ ರೂಢನು

**ಅಭಿಷಕ್ತನು**

ಇಬ್ರಿಯ ಭಾಷೆಯ “ಮೆಸ್ಸೀಯ” ಹಾಗೂ ಗ್ರೀಕ್‌ನ “ಕ್ರಿಸ್ತನು” ಎಂದರೆ “ಅಭಿಷಕ್ತನು” ಎಂಬ ಅರ್ಥವಾಗಿದೆ. ಹಳೆ ಒಡಂಬಡಿಕೆಯಲ್ಲಿನ ಪ್ರವಾದಿಗಳು, ಯಾಜಕರು ಹಾಗೂ ಅರಸರುಗಳು ಅಭಿಷೇಕ ಹೊಂದಿದ್ದರು. ನಮ್ಮ ಈ ಅಧ್ಯಯನದಲ್ಲಿ ಅಂತಿಮವಾಗಿ ಯೇಸುವನ್ನು (ವಚನಗಳು 1, 2ಎ) ಪ್ರವಾದಿಯನ್ನಾಗಿ, ಯಾಜಕನನ್ನಾಗಿ (ವಚನ 3). ಅಂತಿಮ ಯಜ್ಞವನ್ನಾಗಿ, ಮತ್ತು ದೇವರ ಬಲ ಪಾರ್ಶ್ವದಲ್ಲಿ ಅಸೀನನಾದ ಅರಸನನ್ನಾಗಿ ಪ್ರಸ್ತುತ ಪಡಿಸಲಾಗಿದೆ.

---

ಟಿಪ್ಪಣಿ

[1]ದೇವರ ಬಲಪಾರ್ಶ್ವದಲ್ಲಿ ಯೇಸು ನಮಗಾಗಿ ಪ್ರಾರ್ಥಿಸುತ್ತಾನೆ (ರೋಮಾಪುರ 8:34; ಇಬ್ರಿಯ 4:14-16).